ಎಂ.ಕೆ. ಇಂದಿರಾ ಅವರದ್ದು, ಇದು ತರಾಸು ಅವರದ್ದು ಎಂದಷ್ಟೇ ಹೇಳಿದ್ದರು. ಎರಡರಲ್ಲೂ ಸೂಕ್ಷ್ಮ ವ್ಯತ್ಯಾಸಗಳಿವೆ ಎಂದು ಸಮರ್ಥಿಸಿಕೊಂಡಿದ್ದರು.

**◆ ಭಕ್ತಿ ಪ್ರಧಾನ ಸಿನಿಮಾಗಳಲ್ಲೂ ಕೆಲಸ ಮಾಡಿದ್ದೀರಿ. ಆ ಕೆಲಸ ಸಾಮಾಜಿಕ ಚಿತ್ರಗಳಿಗಿಂತ ಭಿನ್ನವೇ?**

ಹಾಗೇನೂ ಇರುವುದಿಲ್ಲ. ಎಲ್ಲ ಚಿತ್ರಗಳಿಗಳಿಗೂ ಅಷ್ಟೇ ಕೌಶಲ ಬೇಕಾಗುತ್ತದೆ. ನಾನು ಹಾಡುಗಳಿಗೆ ಹೆಚ್ಚು ಒತ್ತುಕೊಡುವ ಜಾಯಮಾನದವನು. ಹೀಗಾಗಿ ಎರಡೂ ರೀತಿಯ ಚಿತ್ರಗಳಿಗೆ ಹೊಂದಿಕೊಳ್ಳುತ್ತಿದ್ದೆ.

**◆ ಒಂದು ಕಡೆ ಕೆ.ವಿ. ಜಯರಾಂ. ಇನ್ನೊಂದು ಕಡೆ ನಾಗಾಭರಣ ಅವರಂಥ ನಿರ್ದೇಶಕ. ಈ ಎರಡೂ ಮಾದರಿಗಳ ಸಿನಿಮಾಗಳು ಹೇಗೆ ಭಿನ್ನ?**

ಕೆ.ವಿ. ಜಯರಾಂ ಅವರು ಮೆಲೋಡ್ರಾಮಾ ಬಯಸುತ್ತಿದ್ದರು. ‘ಬಾಡುವ ಹೂವು’, ‘ಶ್ವೇತ ಗುಲಾಬಿ’ ರೀತಿಯ ಚಿತ್ರಗಳಲ್ಲಿ ಇದನ್ನು ಗಮನಿಸಬಹುದು. ನಾಗಾಭರಣ ಅವರೊಟ್ಟಿಗೆ ‘ರಾವಣರಾಜ್ಯ’ ಚಿತ್ರಕ್ಕಾಗಿ ಸೆಟ್ ಹಾಕಿ, ಕೆಲಸ ಮಾಡಿದ್ದೆವು. ‘ಅಂಕುಶ್’ ಹಿಂದಿ ಸಿನಿಮಾದ ರೀಮೇಕ್ ಅದು. ಅದೂ ಆಗ ಚೆನ್ನಾಗಿ ಓಡಿತ್ತು.

**◆ ನೀವು ಆರು ದಶಕಕ್ಕೂ ಹೆಚ್ಚು ಅವಧಿಯಲ್ಲಿ ಸಿನಿಮಾಟೊಗ್ರಫಿಯ ಎಲ್ಲ ತಾಂತ್ರಿಕ ಪಲ್ಲಟಗಳೊಟ್ಟಿಗೇ ಕೆಲಸ ಮಾಡುತ್ತಾ ಬಂದವರು. ಈ ಪಯಣದಲ್ಲಿ ಯಾವ ತಾಂತ್ರಿಕ ಬದಲಾವಣೆಯು ಹೆಚ್ಚು ಮಹತ್ವದ್ದೆನ್ನಿಸುತ್ತದೆ?**

ಸೆಲ್ಯುಲಾಯ್ಡ್‌ನಿಂದ ಡಿಜಿಟಲ್‌ಗೆ ಹೊರಳಿದ್ದು ಮಹತ್ವದ ತಾಂತ್ರಿಕ ಬದಲಾವಣೆ. ಅದು ಸಿನಿಮಾ ದೃಷ್ಟಿಯಿಂದ ತುಂಬಾ ಅನುಕೂಲಕರ. ಸಿನಿಮಾ ಮಾಧ್ಯಮ ಇರುವುದು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲು. ದೊಡ್ಡ ಪರದೆಯಲ್ಲಿ ಕತ್ತಲ ಕೋಣೆಯಲ್ಲಿ ಕುಳಿತು ಸಿನಿಮಾ ನೋಡುವುದು ನಿಜವಾದ ರಸಾನುಭವ. ಈಗ ಡಿಜಿಟಲ್ ಎಲ್ಲರ ಕೈಗೆ ಎಟುಕಿದ ಮೇಲೆ ಆ ರಸಾನುಭವವನ್ನು ಮುಕ್ಕಾಗಿಸುವ ಪ್ರಯೋಗಗಳನ್ನೂ ಕೆಲವರು ಮಾಡುತ್ತಿದ್ದಾರೆ. ಈ ತಾಂತ್ರಿಕ ಬದಲಾವಣೆಯು ನಿರ್ದೇಶಕರ ಧೋರಣೆಯಲ್ಲೂ ಬದಲಾವಣೆ ತಂದಿದೆ. ಹಿಂದೆ ಫಿಲ್ಮ್ ಬಳಸುತ್ತಿದ್ದಾಗ ಚಿತ್ರೀಕರಣ ಮಾಡಿದ ಭಾಗಗಳು ಇಲ್ಲವಾಗುತ್ತಿದ್ದ ಪ್ರಸಂಗಗಳು ವಿರಳವಾಗಿದ್ದವು. ಈಗ ಡಿಜಿಟಲ್ ಸ್ವರೂಪದ ದೃಶ್ಯಗಳನ್ನು ಒಂದು ವ್ಯವಸ್ಥೆಯಿಂದ ಇನ್ನೊಂದಕ್ಕೆ ವರ್ಗಾಯಿಸಿಕೊಳ್ಳುವಾಗ ಎಷ್ಟೋ ಸಲ ಎಲ್ಲವೂ ಅಳಿಸಿ ಹೋಗಿರುವ ಉದಾಹರಣೆಗಳಿವೆ. ಶಿವಮೊಗ್ಗದಲ್ಲಿ ಒಮ್ಮೆ ಕಿರುಚಿತ್ರವೊಂದರ ಚಿತ್ರೀಕರಣ ಮಾಡಿದ್ದಾಗ ನನಗೂ ಇಂತಹ ಅನುಭವ ಆಗಿತ್ತು.

ಸ್ಟಾರ್‌ಗಳ ಸಿನಿಮಾ ಚಿತ್ರೀಕರಣಕ್ಕೆ ಈಗ ದೀರ್ಘಾವಧಿ ತೆಗೆದುಕೊಳ್ಳುತ್ತಿದ್ದಾರೆ.

